ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

DEPARTMENT / SUBJECT: ಪ್ರಕೃತಿ

NAME OF THE NEWS PAPER: ಪ್ರಜಾವಾಣಿ    DATE 17/03/2020

# 'ಕೆರೆ ಒತ್ತುವರಿ ತಡೆಗೆ ಇಲಾಖೆ ರಚಿಸಿ'

ಪ್ರಜಾ 17-3-20

ಬೆಂಗಳೂರು: 'ಕೆರೆಗಳ ಒತ್ತುವರಿ ತಡೆಗೆ ಕೆರೆ ಒತ್ತುವರಿ ಸಂರಕ್ಷಣಾ ಇಲಾಖೆಯನ್ನು ರಚಿಸಬೇಕು. ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯೊಬ್ಬರನ್ನು ಇಲಾಖೆಯ ಅಧ್ಯಕ್ಷರನ್ನಾಗಿ ನೇಮಿಸಬೇಕು' ಎಂದು ಕಾಂಗ್ರೆಸ್‌ನ ಮುಖಂಡ ಕೆ.ಬಿ.ಕೋಳಿವಾಡ ಆಗ್ರಹಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿರುವ ಕೆರೆಗಳ ಒತ್ತುವರಿ ಅಧ್ಯಯನಕ್ಕೆ ಸರ್ಕಾರ ನನ್ನ ನೇತೃತ್ವದಲ್ಲಿ ಸದನ ಸಮಿತಿ ರಚಿಸಿತು. ಒತ್ತುವರಿ ಕುರಿತ ಸಂಪೂರ್ಣ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಆದರೂ ಕ್ರಮ ಕೈಗೊಂಡಿಲ್ಲ' ಎಂದು ದೂರಿದರು.



'ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರ ಕೆರೆಗಳ ಒತ್ತುವರಿ ಅಧ್ಯಯನಕ್ಕೆ ಮತ್ತೆ ಮೂವರು ತಹಶೀಲ್ದಾರ್‌ಗಳ ನೇತೃತ್ವದ ಸಮಿತಿ ರಚನೆಗೆ ಮುಂದಾಗಿದೆ. ಎಲ್ಲ ಸರ್ಕಾರಗಳು ಮತ್ತೆ ಮತ್ತೆ ಅಧ್ಯಯನ ಸಮಿತಿಗಳನ್ನು ರಚಿಸಿ, ಹಳೆಯ ವರದಿಗಳನ್ನು ಮುಚ್ಚಿ ಹಾಕುತ್ತಿವೆ. ಇದು ಕಾಲಹರಣದ ತಂತ್ರಗಾರಿಕೆ' ಎಂದು ಆಕ್ರೋಶ ಹೊರಹಾಕಿದರು.

'ಬೆಂಗಳೂರು ನಗರದ 837 ಕೆರೆಗಳು ಹಾಗೂ ಗ್ರಾಮಾಂತರ ಜಿಲ್ಲೆಯ 710 ಕೆರೆಗಳು ಒತ್ತುವರಿಯಾಗಿವೆ. ಇದರಲ್ಲಿ ಖಾಸಗಿ ಬಿಲ್ಡರ್‌ಗಳು, ಬಿಡಿಎ, ಶಿಕ್ಷಣ, ಆರೋಗ್ಯ ಸೇರಿ ಇನ್ನಿತರ ಸರ್ಕಾರಿ ಇಲಾಖೆ ಅಧಿಕಾರಿಗಳೂ ಭಾಗಿಯಾಗಿದ್ದಾರೆ. ಕೆರೆ ಜಾಗದಲ್ಲಿ ನಿವೇಶನ, ಬಹುಮಹಡಿ ಕಟ್ಟಡಗಳನ್ನು ನಿರ್ಮಿಸಿ, ಗ್ರಾಹಕರಿಗೆ ಮಾರಾಟ ಮಾಡಿದ್ದಾರೆ. 23 ಕೆರೆಗಳನ್ನು ಬಿಡಿಎ ಸರ್ವನಾಶ ಮಾಡಿದೆ' ಎಂದು ವಿವರಿಸಿದರು.